ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ, ಭದ್ರಾವತಿ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 6402/21

ಪ್ರಾ.ಸಾ. : 3

ಚಾ.ಸಾ. : 4

| | | |
|---|---|---|
| ಹೆಸರು | : | ರವಿಕಿರಣ |
| ತಂದೆಯ ಹೆಸರು | : | ಲಕ್ಷ್ಮಣಮೂರ್ತಿ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ಬೆಂಗಳೂರು |

---

ಪ್ರಮಾಣೀಕರಿಸಲಾದ ದಿನಾಂಕಃ 22.08.2023

**ಮುಖ್ಯ ವಿಚಾರಣೆಃ** ಮಾನ್ಯ ಸ. ಸ. ಅ. ರವರಿಂದ:

ಚಾಸಾ1 ನನ್ನ ತಂಗಿ , ಚಾಸಾ2 ಮತ್ತು 3 ನನ್ನ ತಂದೆ ತಾಯಿ. ಚಾಸಾ5 ಮತ್ತು 6 ನನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮ , ಚಾಸಾ7 ಚಾಸಾ5 ಮತ್ತು 6 ರವರ ಮಗ. ಚಾಸಾ8 ಮತ್ತು 9 ಗೊತ್ತು. ಈ ದಿನ ನ್ಯಾಯಾಲಯದಲ್ಲಿ 2 ರಿಂದ 4 ನೇ ಆರೋಪಿತರು ಹಾಜರಿದ್ದಾರೆ. 1 ನೇ ಆರೋಪಿ ಈ ದಿನ ಗೈರು ಹಾಜರಾಗಿದ್ದು, ಆತನ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು ಆರೋಪಿ ಗುರುತಿಸುವಿಕೆ ಕುರಿತಾಗಿ ತಮ್ಮ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಆತನನ್ನು ಪುನಃ ನೋಡಿದರೆ ಗುರುತಿಸುತ್ತೇನೆ.

ಚಾಸಾ1 ಹಾಗೂ 1 ನೇ ಆರೋಪಿಯ ವಿವಾಹ ಭದ್ರಾವತಿಯ ಮಲ್ಲೇಶ್ವರ ಸಬಾ ಭವನದಲ್ಲಿ 2019 ರಲ್ಲಿ ಜರುಗಿತು. ವರೋಪಚಾರದ ರೂಪದಲ್ಲಿ 10 ತೊಲ ಬಂಗಾರ , ರೂ. 3 ಲಕ್ಷ ಹಣವನ್ನು ನೀಡಿರುತ್ತೇವೆ. ಮದುವೆಯ ಸಂಪೂರ್ಣ ಖರ್ಚನ್ನು ನಾವೇ ಭರಿಸಿರುತ್ತೇವೆ. ಆಷಾಡಕ್ಕೆಂದು ಚಾಸಾ1 ರವರನ್ನು ಮನೆಗೆ ಕರೆದುಕೊಂಡು ಬಂದಿದ್ದೇವು. ಆಕೆಗೆಂದು ನೀಡಿದ್ದ 15 ತೊಲ ಬಂಗಾರವನ್ನು ಅಡವಿಟ್ಟಿದ್ದರು. ಅದನ್ನು ನಾವು ಬಿಡಿಸಿಕೊಟ್ಟಿರುತ್ತೇವೆ.

ದಿಃ 07.08.19 ರಂದು ಕಷ್ಟ ಎಂದು ಕೇಳಿಕೊಂಡ ಕಾರಣ ರೂ. 50 ಸಾವಿರ ಹಣವನ್ನು ಖಾತೆಗೆ ಜಮಾ ಮಾಡಿದೇವು. ದಿಃ 14.08.19 ರಂದು ರೂ. 80 ಸಾವಿರ ಹಣವನ್ನು ಖಾತೆಗೆ ಜಮಾ ಮಾಡಿದೇವು. ದಿಃ 23.12.19 ರಂದು ರೂ. 20 ಸಾವಿರ ಹಣವನ್ನು ಖಾತೆಗೆ ಜಮಾ ಮಾಡಿದೇವು. ಸದರಿ ಹಣವನ್ನು 4 ನೇ ಆರೋಪಿಯ ಖಾತೆಗೆ ಜಮಾ ಮಾಡುವಂತೆ

1 ನೇ ಆರೋಪಿ ಖಾತೆಗೆ ಸಂಖ್ಯೆ ನೀಡಿ ತಿಳಿಸಿದ್ದರು. ಅಂತೆಯೇ 4 ನೇ ಆರೋಪಿಯ ಖಾತೆಗೆ ಹಣ ಜಮಾ ಮಾಡಲಾಗಿದೆ.

ದಿಃ 29.12.19 ರಂದು ಚಾಸಾ1 ರವರ ಕಿವಿಗೆ ಹಲ್ಲೆ ಮಾಡಿ, ಆಕೆಗೆ ರಕ್ತತರಿಸಿರುತ್ತಾರೆ ಎಂಬ ವಿಚಾರ ನನಗೆ ಚಾಸಾ3 ರವರಿಂದ ತಿಳಿಯಿತು. ನಾನು, ಚಾಸಾ5 ಮತ್ತು 6 ರವರು ಚಾಸಾ1 ಇದ್ದ ಸ್ಥಳಕ್ಕೆ ಹೋಗಿ , ಆಕೆಗೆ ಚಿಕಿತ್ಸೆಯನ್ನು ಕೋಡಿಸಿ ನಂತರ ನಂತರ ಆಕೆಯನ್ನು ಅಲ್ಲೆ ಬಿಟ್ಟು ಬಂದಿರುತ್ತೇವೆ. ಇದೇ ರೀತಿ ಪುನಃ ಘಟನೆ ಆದಕಾರಣ ಚಾಸಾ1 ರವರನ್ನು ಭದ್ರಾವತಿಯ ನಮ್ಮ ಮನೆಗೆ ಕರೆದುಕೊಂಡು ಬಂದೆವು. 1 ನೇ ಆರೋಪಿ ಆಗಾಗ ಭದ್ರಾವತಿಯ ನಮ್ಮ ಮನೆಗೆ ಬಂದು ಹೋಗುತ್ತಿದ್ದರು.

ದಿಃ 25.07.20 ರಂದು 1 ನೇ ಆರೋಪಿ ಭದ್ರಾವತಿಯ ನಮ್ಮ ಮನೆಗೆ ಬಂದು , ಚಾಸಾ1 ರವರೊಂದಿಗೆ ರೂಂ ನಲ್ಲಿ ಮಾತನಾಡುತ್ತಿದ್ದರು. ಆ ಸಮಯಕ್ಕೆ ಆಕೆಗೆ ಹಲ್ಲೆ ಮಾಡಿ , ಆಕೆಯನ್ನು ಸಾಯಿಸುವುದಾಗಿ ಬೆದರಿಕೆಯನ್ನು ನೀಡಿರುತ್ತಾನೆ. ಅಂತೆಯೇ ಚಾಸಾ1 ರವರು ಜೋರಾಗಿ ಕಿರುಚಿದಳು. ಅಕ್ಕಪಕ್ಕದ ಮನೆಯವರಾದ ಚಾಸಾ8 ಮತ್ತು 9 ಮತ್ತು ನಾವೇಲ್ಲರೂ ಸೇರಿ ಬಿಡಿಸಿದೆವು. ಈ ವಿಚಾರವಾಗಿ ದಿಃ 30.08.20 ರಂದು ಚಾಸಾ1 ರವರು ಠಾಣೆಗೆ ದೂರನ್ನು ನೀಡಿರುತ್ತಾರೆ. ದಿಃ 31.08.20 ರಂದು ನಾನು ಠಾಣೆಗೆ ಹೋಗಿ ಕೇಸಿನ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸ.ಸ.ಅ. ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)

**<u>ಪಾಟೀ ಸವಾಲುಃ</u>** ಮಾನ್ಯ ಸ. ಸ. ಅ. ರವರಿಂದಃ

ಚಾಸಾ1 ರವರಿಗೆ 2 ರಿಂದ 4 ನೇ ಆರೋಪಿತರು ಸಹ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಿರುತ್ತಾರೆ ಎಂದರೆ ಸರಿ . ಮುಂದುವರೆದು ಚಾಸಾ1 ರವರು ಆಕೆ ಒಳಗಾಗುತ್ತಿದ್ದ ಹಿಂಸೆ ಕುರಿತು ನಮಗೆ ಪೋನಿನಲ್ಲಿ ತಿಳಿಸುತ್ತಿದ್ದಳು ಎಂದು ನುಡಿಯುತ್ತಾರೆ. ಬೆಂಗಳೂರಿನಲ್ಲಿ ನನ್ನ ತಾಯಿ ಹೆಸರಿಗೆ ಇದ್ದ ಸೈಟನ್ನು ಮಾರಾಟ ಮಾಡಿ ಹಣವನ್ನು ತಂದು ಕೊಡುವಂತೆ ಚಾಸಾ1 ರವರಿಗೆ ಹಿಂಸೆಯನ್ನು ನೀಡಿರುತ್ತಾರೆ.

**<u>ಆರೋಪಿತರ ಪರವಾಗಿ ಪಾಟೀ ಸವಾಲುಃ</u>** ಶ್ರೀ ಎಸ್ ಆರ್ ಕೆ ವಕೀಲರಿಂದಃ

ನಾನು ಬಿ. ಕಾಂ. ಓದಿರುತ್ತೇನೆ. ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ಕಳೆದ 2 ವರ್ಷಗಳಿಂದ ನಾನು ನನ್ನ ಹೆಂಡತಿಯೊಂದಿಗೆ ಬೆಂಗಳೂರಿನ ಹೆಬ್ಬಾಳದಲ್ಲಿ ಪ್ರತ್ಯೇಕವಾಗಿ ವಾಸವಿದ್ದೇನೆ. ಭದ್ರಾವತಿ ಮನೆಯಲ್ಲಿ ಚಾಸಾ1 ರಿಂದ 3 ರವರು ವಾಸ ಇದ್ದಾರೆ. ನನ್ನ ತಂದೆಯ ತಾಯಿಯಾದ ಜಯಮ್ಮ ಕರೋನ ಸಮಯದಲ್ಲಿ ಮೃತರಾದರು. ಆಗ ನಾನು ಅವರ ಅಂತ್ಯಸಂಸ್ಕಾರಕ್ಕೆ ಬಂದಿದ್ದೆ.

ಆರೋಪಿತರು ಜಯಮ್ಮ ರವರ ಅಂತ್ಯಸಂಸ್ಕಾರದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿ . ದಿಃ 25.07.20 ರಂದು ಭದ್ರಾವತಿ ನಮ್ಮ ಮನೆಗೆ ನನ್ನ ಮುಖ್ಯ ವಿಚಾರಣೆಯಲ್ಲಿ ವೇಳೆಯಲ್ಲಿ ತಿಳಿಸಿದ ರೀತಿಯ ಯಾವುದೇ ಘಟನೆ ನಡೆದಿರುವುದಿಲ್ಲ ಎನ್ನುವುದು ಸರಿಯಲ್ಲ. ಆರೋಪಿ 2 ರಿಂದ 4 ರವರು ಚೆನ್ನರಾಯಪಟ್ನ ತಾ. ಕೆ ದಾಸಪುರದಲ್ಲಿ ವಾಸ ಇದ್ದಾರೆ ಎಂದರೆ ಸರಿ .

ನಾಗರಬಾವಿಯ ನನ್ನ ತಂಗಿ ವಾಸವಿದ್ದ ಮನೆಯಲ್ಲಿ ಆಕೆಗೆ 1 ನೇ ಆರೋಪಿ ಹಲ್ಲೆ ಮಾಡಿರುತ್ತಾನೆ ಎಂಬ ವಿಚಾರ ಆಕೆ ಫೋನ್ ಮೂಲಕ ನನಗೂ ಮತ್ತು ನನ್ನ ತಾಯಿಗೂ ತಿಳಿಸಿರುತ್ತಾರೆ. 2 ರಿಂದ 4 ನೇ ಆರೋಪಿತರು ನಾಗರಬಾವಿಯ ಮನೆಯಲ್ಲಿ ವಾಸ ಇರಲಿಲ್ಲ ಎಂದರೆ ಸರಿ . 2 ರಿಂದ 4 ನೇ ಆರೋಪಿತರು ಚಾಸಾ1 ರವರಿಗೆ ಯಾವುದೇ ರೀತಿ ಮಾನಸಿಕ ಅಥವಾ ದೈಹಿಕ ಹಿಂಸೆ ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ.

ಮದುವೆ ಖರ್ಚಿನ ಸಲುವಾಗಿ 4 ನೇ ಆರೋಪಿಯಿಂದ ನಾವು ಕೈಗಡ ಸಾಲ ಪಡೆದುಕೊಂಡಿದ್ದು , ಅದನ್ನು ಆತನ ಖಾತೆಗೆ ಜಮಾ ಮಾಡುವುದರ ಮೂಲಕ ತೀರಿಸಿರುತ್ತೇವೆ ಎನ್ನುವುದು ಸರಿಯಲ್ಲ. ಮುಂದುವರೆದು, ನಾವು 4 ನೇ ಆರೋಪಿಯಿಂದ ಸಾಲ ಪಡೆದುಕೊಂಡಿರಲಿಲ್ಲ ಎಂದು ನುಡಿಯುತ್ತಾರೆ.

ಚಾಸಾ1 ರವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುವುದಾಗಿ ಸಲ್ಲಿಸಿಕೊಂಡಿರುವ ದಾಖಲೆ ಕೇಸಿಗೆ ಅನುಕೂಲವಾಗುವ ರೀತಿಯಲ್ಲಿ ಪಡೆದುಕೊಂಡು ಸಲ್ಲಿಸಿರುವ ದಾಖಲೆ ಅನ್ನುವುದು ಸರಿಯಲ್ಲ. ಆರೋಪಿತರಿಂದ ಅಕ್ರಮವಾಗಿ ದುರ್ಲಾಭ ಪಡೆಯಬೇಕೆಂಬ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಬೆಂಗಳೂರಿನಲ್ಲಿ ಚಾಸಾ1 ರವರಿಗೆ 1 ನೇ ಆರೋಪಿ ಹೊಡಿಬಡಿ ಮಾಡಿದ್ದಾನೆಂಬ ವಿಚಾರವಾಗಿ ನಾನು ಆಗಲೀ, ಚಾಸಾ1 ರಿಂದ 3 ರವರು ಆಗಲೀ ಬೆಂಗಳೂರಿನಲ್ಲಿ ಯಾವುದೇ ದೂರನ್ನು ನೀಡಿಲ್ಲ ಎಂದರೆ ಸರಿ . 1 ನೇ ಆರೋಪಿ ಚಾಸಾ1 ರವರಿಗೆ ಸೇರಿದ ಯಾವುದೇ ಒಡವೆಗಳನ್ನು ಅಡವು ಇಟ್ಟಿರಲಿಲ್ಲ ಎನ್ನುವುದು ಸರಿಯಲ್ಲ, ನಾವು ಅದನ್ನು ಬಿಡಿಸಿಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಚಾಸಾ1 ರವರು ತವರು ಮನೆಗೆ ಬಂದ ಸಮಯಕ್ಕೆಆಕೆಗೆ ಸೇರಿದ ಎಲ್ಲಾ ಒಡವೆಗಳನ್ನು ಆಕೆ ತನ್ನೊಂದಿಗೆ ತಂದಿದ್ದಳು ಎನ್ನುವುದು ಸರಿಯಲ್ಲ.

ದಿಃ 29.12.19 ರಿಂದ ಈ ದಿನದವರೆಗೂ ಚಾಸಾ1 ಹಾಗೂ ಆರೋಪಿತರ ನಡುವೆ ಯಾವುದೇ ಮಾತುಕತೆ ಇರುವುದಿಲ್ಲ ಎನ್ನುವುದು ಸರಿಯಲ್ಲ. ಚಾಸಾ1 ನನ್ನ ತಂಗಿಯಾದ ಕಾರಣ , ಆಕೆಯ ಪರವಾಗಿ ಹಾಗೂ ಆರೋಪಿತರ ವಿರುದ್ಧವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಯಾವುದೇ ಆರೋಪಿತರು ಚಾಸಾ1 ರವರಿಗೆ ಮಾನಸಿಕ ಅಥವಾ ದೈಹಿಕ ಹಿಂಸೆ ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ. ವಿನಾಕಾರಣ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓ. ಹೇ. ಕೇ. ಸ. ಇ. ಎ. ಒ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಭದ್ರಾವತಿ